ಯುಗಾದಿ ಪ್ರಬಂಧ ಸ್ಪರ್ಧೆ 2021

## ತೀರ್ಪುಗಾರರು ಮೆಚ್ಚಿದ ಪ್ರಬಂಧ

◆ ಸಂತೆಬೆನ್ನೂರು ಫೈಜ್ನಟ್ರಾಜ್
◆ ಕಲೆ: ಗುರು ನಾವಳ್ಳಿ



### ಅವಾಗಂದ್ರೆ ಅವಾಗ...

ಭಾನುವಾರದಂಥಾ ಭಾನುವಾರ ಕೂಡಾ ನಮ್ಮನೆ ಎದುರು ನಾವು ಗೋಲಿ, ಚಿನ್ನಿದಾಂಡು ಆಡಂಗಿರ್ಲಿಲ್ಲ ಅಂದ್ರೆ ನೀವು ನಂಬೇಕಪ್ಪ! ನಮ್ಮ ಮನೆ ದಾರಿಯಿಂದ ಪೂರ್ವಕ್ಕೆ ಮಿಡ್ಲಿಸ್ಕೂಲ್ ಈಶ್ವರಪ್ಪ ಮೇಷ್ಟ್ರು ಮನೆ. ಸೋಮವಾರದಿಂದ ಶನಿವಾರದ ಮಾರ್ನಿಂಗ್ ಕ್ಲಾಸ್ ಮುಗಿಯೋತನಕ ಅವರ ಸುಪರ್ದಿಲಿದ್ದರೂ ಭಾನುವಾರದ ರಜೆಯ ಸ್ವಾತಂತ್ರ್ಯ ಇರಲಿಲ್ಲ. ನಮ್ಮ ಮನೆ ದಾಟಿಯೇ ಅವರು ಮಟನ್ ಬಾಬಣ್ಣನ ಅಂಗಡಿಗೆ ಕುರಿ ಮಾಂಸಕ್ಕೆ ಸ್ಟೀಲ್ ಕೆಟಲ್ ಹಿಡಿದು ಹೋಗಬೇಕು. ಹಾಗೆ ಹೊರಟರೆ ಮುಗೀತು ಕತೆ. ಅಷ್ಟು ದೂರ ನಿಂತು ಕಳ್ಳಿಸಾಲ್, ಬೇಲಿಸಾಲಲ್ಲಿ ಬಲಿತ ಓತಿಕ್ಯಾತ ತಲೆ ಹಾಕಿದಂತೆ ನಮ್ಮನ್ನೇ ನೋಡಿ ಗುರಾಯಿಸಿ, ಬೋಳಾದ ತಲೆ ಹಾಕಿ ಮುನ್ನಡೆದರೆ ಗೋ.. ..ವಿಂದ!

ಇಡೀ ಭಾನುವಾರ ಉಪ್ಪಿಲ್ಲದ ಸಪ್ಪೆ ಸಾಂಬಾರು ತಿಂದಂತೆ ನಂದು ಮತ್ತು ಹಟ್ಟಿ ಗೆಳೆಯರ ಗತಿ!

ಭಾನುವಾರ ಅನ್ನೋದು ಬಿಸಿಲು ಬಂದಾಗ ಕರಗೋ ಮಂಜಂತೆ ಕರಗಿ ಸೋಮವಾರ ಬಂದ ತಕ್ಷಣ ಕಾಣದಂತೆ ಕಳೆದೇಹೋಯ್ತು! ಶಾಲೆಗೆ ಹೋಗಬೇಕಲ್ಲ? ಈಶ್ವರಪ್ಪ ಮೇಷ್ಟ್ರನ ಎದುರಿಸುವ ಬಗೆ ಹೇಗೆ? ಗೋಲಿ ಆಡಿದ ನಮಗೆಲ್ಲಾ ಫೀಜಿರಲಿಲ್ಲ!

Sdfy, ಹುಡುಗರ ಶಾಲೆ ನಮ್ದು. ಹುಡುಗೀರ ರಗಳೆ ಇರಲಿಲ್ಲ. ಇದ್ದಿದ್ದರೆ ಮನೆಗೆ ಸುಳ್ಳಿನ ಕತೆಯ ಅನಾವರಣ ಆಗಿ ರಾದ್ಧಾಂತವಾಗೋದು! ಈಶ್ವರಪ್ಪ ಮೇಷ್ಟ್ರು ನಿನ್ನೆ ನೋಡಿದ್ದಾರೆ, ಇವತ್ತು ಅದೇ ಗೋಲಿಗಳಿಂದ ಹೊಡೆದು ಬುಲ್ಡೆಗೆ ಬುಗುಟು ಬರಿಸೋದು ಗ್ಯಾರಂಟಿ ಅಂತ ಊರ ಹೊರಗಿನ ಅಬ್ಬಿಗೆರೆ ಸಾಲುಮರದ ಸಾಲು ಹಿಡಿದು ಕಡ್ಲೆ ಹಿಟ್ಟಿನ ಪಾಟಿ ಚೀಲ ಈಗಿನ ಜಟ್‌ಪಟ್ ನಗರದ ಪೆಟ್ಟಿಗೆ ಅಂಗಡಿಗಳ ಹಿಂದಿನ ತಿಪ್ಪೆರಾಶಿಗಳಲ್ಲಿ ಮುಚ್ಚಿಟ್ಟು ಅತ್ತಿ ಮರ ಹತ್ತಿ ಕೂರ್ತಿದ್ವಿ!

ಇಡೀ ದಿನ ಅತ್ತಿ ಹಣ್ಣು, ನೇರಳೆ ಹಣ್ಣು ತಿಂದು ಜಗ್ ಬೋರಲ್ಲಿ ನೀರು ಜಗ್ಗಿ ಕುಡಿದು, ದೂರದಿಂದ ಶಾಲೆ ಬಿಟ್ಟಿದ್ದರೆ, ಮಕ್ಕಳು ಬರುತ್ತಿದ್ದರೆ ಮೆಲ್ಲಗೆ ಇಳಿದು ಪಾಟೀ ಚೀಲದ ತಿಪ್ಪೆಗುಂಡಿಗೆ ಹೋಗಿ ಚೀಲ ತಗಂಡು, ಕೊಡವಿ ಸಾಲೆಯಿಂದ ಬಂದಂತೆ ಫೋಜು ಕೊಡುತ್ತಾ ಮನೆ ಕಡೆ ಪಯಣ!

ಶಾಲೆ ಮುಖ ನೋಡದೇ ಎಷ್ಟು ದಿನ ಇರಲಾದೀತು? ಮಂಗಳವಾರ ಬೆನ್ನಿಗೆ ರಿವಾಲ್ವರ್ ಹಿಡಿದು ಕರೆತಂದಂತೆ ನಿಧಾನ ಹೆಜ್ಜೆ ಹಾಕಿ ಮರದ ಮಣೆ ಮೇಲೆ ಪಟ್ಟಂಗ ಹಾಕಿ ಕೂರ್ತಿದ್ವಿ!